ಪ್ರಿಯಾ
ಸಿಮೆಂಟ್™
ಪ್ರಚಂಡ ಬಲವಾದ ಘರ್ಜನೆ

CELEBRATING 40 YEARS OF STRENGTH

# ಹೊಸ ತಲೆಮಾರಿನ
# ವಿಶೇಷವಾದ ಒಂದು ಸ್ಟೋರ್‌ಗೆ
# ಅರ್ಜಿಯನ್ನು ಸಲ್ಲಿಸಿ




priyacement.official | www.priyacement.com

# ಪ್ರಿಯಾ ಸಿಮೆಂಟ್‌ನೊಂದಿಗೆ ಪಾಲುದಾರರಾಗಿ


ನಿಮ್ಮದೇ ಸ್ವಂತ ವ್ಯವಹಾರ ಕಟ್ಟಿಕೊಳ್ಳಿ. ನಿಮ್ಮ ಸ್ವಂತ ಭವಿಷ್ಯ ರೂಪಿಸಿಕೊಳ್ಳಿ. ಭಾರತವು ವೇಗವಾಗಿ ಬೆಳೆಯುತ್ತಿದೆ. ಹೊಸ ಮನೆಗಳು, ಆಧುನಿಕ ಮೂಲಸೌಕರ್ಯಗಳು ಮತ್ತು ನಿರಂತರ ನಿರ್ಮಾಣ ಚಟುವಟಿಕೆಗಳು ಕಟ್ಟಡ ನಿರ್ಮಾಣ ಸಾಮಗ್ರಿಗಳ ಕ್ಷೇತ್ರದಲ್ಲಿ ಅಪೂರ್ವ ಅವಕಾಶಗಳನ್ನು ತೆರೆದಿಡುತ್ತಿವೆ. ಪ್ರಿಯಾ ಸಿಮೆಂಟ್, ಮಹತ್ವಾಕಾಂಕ್ಷೆಯ ಉದ್ಯಮಿಗಳು, ಯುವ ವೃತ್ತಿಪರರು, ಮಹಿಳಾ ಉದ್ಯಮಿಗಳು ಹಾಗೂ ವ್ಯವಹಾರ ಮನೋಭಾವ ಹೊಂದಿರುವ ವ್ಯಕ್ತಿಗಳನ್ನು **ಪ್ರಿಯಾ ಸಿಮೆಂಟ್ ಸಲ್ಯೂಷನ್ಸ್ ಸೆಂಟರ್ ಎಂಬ ವಿಶೇಷ ಪಾಲುದಾರಿಕೆ ಅವಕಾಶದ ಮೂಲಕ** ಹೊಸ ಚಿಲ್ಲರೆ ವ್ಯಾಪಾರ ಕ್ರಾಂತಿಯ ಭಾಗವಾಗಲು ಆಹ್ವಾನಿಸುತ್ತದೆ.




ನೀವು ಅನುಭವಿ ಉದ್ಯಮಿಯಾಗಿರಲಿ ಅಥವಾ ನಿಮ್ಮ ಉದ್ಯಮಶೀಲತೆಯ ಪಯಣವನ್ನು ಆರಂಭಿಸಲು ಬಯಸುವವರಾಗಿರಲಿ ನಿಮ್ಮದೇ ವ್ಯವಹಾರವನ್ನು ಸ್ವತಂತ್ರವಾಗಿ ನಡೆಸುವ ಮಟ್ಟಕ್ಕೆ ತಲುಪುವವರೆಗೆ ಪ್ರಿಯಾ ಸಿಮೆಂಟ್ ಪ್ರತಿಯೊಂದು ಹಂತದಲ್ಲೂ ನಿಮಗೆ ಮಾರ್ಗದರ್ಶನ ಮತ್ತು ಸಂಪೂರ್ಣ ಬೆಂಬಲವನ್ನು ನೀಡುತ್ತದೆ.

# ಪ್ರಿಯಾ ಸಿಮೆಂಟ್ ಸಲ್ಯೂಷನ್ಸ್ ಸೆಂಟರ್ ಎಂದರೆ ಏನು?

**ಪ್ರಿಯಾ ಸಿಮೆಂಟ್ ಸಲ್ಯೂಷನ್ಸ್ ಸೆಂಟರ್** ಎಂಬುದು ಪ್ರಿಯಾ ಸಿಮೆಂಟ್‌ನ ವಿಶೇಷ ಶೋರೂಮ್ ಆಗಿದ್ದು, ವೈಯಕ್ತಿಕ ಮನೆ ನಿರ್ಮಾಪಕರು, ಬಿಲ್ಡರ್‌ಗಳು, ಗುತ್ತಿಗೆದಾರರು, ಮೇಸ್ತ್ರಿಗಳು, ವಾಸ್ತುಶಿಲ್ಪಿಗಳು, ಒಳಾಂಗಣ ವಿನ್ಯಾಸಕಾರರು, RMC ಪೂರೈಕೆದಾರರು, ಬ್ಲಾಕ್ ತಯಾರಕರು ಸೇರಿದಂತೆ ವಿವಿಧ ಗ್ರಾಹಕರು ಇಲ್ಲಿ ಭೇಟಿ ನೀಡಿ ತಮ್ಮ ಅಗತ್ಯಗಳಿಗೆ ಸೂಕ್ತ ಪರಿಹಾರಗಳನ್ನು ಪಡೆಯಬಹುದು. ಈ ಶೋರೂಮ್‌ನಲ್ಲಿ ಸಿಮೆಂಟ್‌ಗೆ ಸಂಬಂಧಿಸಿದ ಎಲ್ಲಾ ಅಗತ್ಯಗಳಿಗೆ ಪೂರೈಕೆಹಾಗೂ ತಜ್ಞರ ಸಲಹೆಯ ಮೂಲಕ ಸಮಗ್ರ ಪರಿಹಾರಗಳನ್ನು ಒದಗಿಸಲಾಗುತ್ತದೆ.



## ನಮ್ಮ ಬದ್ಧತೆ

ಪ್ರಿಯಾ ಸಿಮೆಂಟ್‌ನಲ್ಲಿ ಯಶಸ್ವಿ ಪಾಲುದಾರಿಕೆಗಳು ನಂಬಿಕೆ, ಪಾರದರ್ಶಕತೆ ಮತ್ತು ದೀರ್ಘಕಾಲೀನ ಬೆಳವಣಿಗೆಯ ಮೇಲೆ ನಿರ್ಮಾಣವಾಗುತ್ತವೆ ಎಂಬ ನಂಬಿಕೆ ನಮ್ಮದು. ನಮ್ಮ ಉದ್ದೇಶ ಕೇವಲ ವಿಶೇಷ ಸ್ಟೋರ್‌ಗಳನ್ನು ಸ್ಥಾಪಿಸುವುದಲ್ಲ; ನಮ್ಮೊಂದಿಗೆ ಹೆಜ್ಜೆಹಾಕುತ್ತಾ ಯಶಸ್ವಿಯಾಗಿ ಬೆಳೆಯುವ ವ್ಯವಹಾರ ಪಾಲುದಾರರನ್ನು ರೂಪಿಸುವುದಾಗಿದೆ. ನೀವು ಮಹತ್ವಾಕಾಂಕ್ಷೆಯುಳ್ಳವರು, ಬದ್ಧತೆಯಿಂದ ಕಾರ್ಯನಿರ್ವಹಿಸುವವರು ಹಾಗೂ ಅರ್ಥಪೂರ್ಣವಾದದ್ದನ್ನು ನಿರ್ಮಿಸುವ ಉತ್ಸಾಹ ಹೊಂದಿದ್ದರೆ, ನಿಮ್ಮೊಂದಿಗೆ ಕೈಜೋಡಿಸಲು ನಾವು ಸಂತೋಷಪಡುತ್ತೇವೆ.



## ಅರ್ಜಿ ಸಲ್ಲಿಸಲು ಯಾರು ಅರ್ಹರು?

**ಸಿಮೆಂಟ್ ಉದ್ಯಮದಲ್ಲಿ ಮೊದಲೇ ಅನುಭವವಿರಬೇಕೆಂಬುದು ಕಡ್ಡಾಯವಿಲ್ಲ, ನಾವು ಈ ಕೆಳಗಿನವರಿಂದ ಅರ್ಜಿಗಳನ್ನು ಸ್ವಾಗತಿಸುತ್ತೇವೆ:**

- ಯುವ ಉದ್ಯಮಿಗಳು
- ಮಹಿಳಾ ಉದ್ಯಮಿಗಳು
- ಈಗಾಗಲೇ ವ್ಯಾಪಾರಿಗಳಾಗಿರುವವರು ಮತ್ತು ರೀಟೇಲರ್‌ಗಳು
- ತಮ್ಮ ವ್ಯವಹಾರವನ್ನು ವಿಸ್ತರಿಸಲು ಬಯಸುವ ಉದ್ಯಮಿಗಳು
- ನಿರ್ಮಾಣ ಸಾಮಗ್ರಿಗಳ ವ್ಯಾಪಾರಿಗಳು
- ಸ್ವಯಂ-ಉದ್ಯೋಗ ಅವಕಾಶಗಳನ್ನು ಹುಡುಕುತ್ತಿರುವ ವೃತ್ತಿಪರರು
- ವ್ಯವಹಾರ ಬೆಳವಣಿಗೆಯ ಬಗ್ಗೆ ಆಸಕ್ತಿ ಹೊಂದಿರುವ ವ್ಯಕ್ತಿಗಳು



# ಪ್ರಿಯಾ ಸಿಮೆಂಟ್‌ನೊಂದಿಗೆ ಏಕೆ ಪಾಲುದಾರರಾಗಬೇಕು?

**ಒಂದು ವಿಶ್ವಾಸಾರ್ಹ ಬ್ರ್ಯಾಂಡ್**
ಪ್ರಿಯಾ ಸಿಮೆಂಟ್ ದಕ್ಷಿಣ ಭಾರತದ ಅತ್ಯಂತ ಗೌರವಾನ್ವಿತ ಸಿಮೆಂಟ್ ಬ್ರ್ಯಾಂಡ್‌ಗಳಲ್ಲಿ ಒಂದಾಗಿದ್ದು, ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯ ಬಲಿಷ್ಠ ಪರಂಪರೆಯನ್ನು ಹೊಂದಿದೆ.

**ವ್ಯವಹಾರದ ಪ್ರತಿಯೊಂದು ಹಂತಕ್ಕೂ ಸಂಪೂರ್ಣ ಬೆಂಬಲ**
ನಿಮ್ಮ ಸ್ಟೋರ್‌ನ ಯೋಜನೆಯಿಂದ ಕಾರ್ಯಾಚರಣೆಯ ಆರಂಭದವರೆಗೆ ಸ್ಥಾಪನೆಯ ಪ್ರತಿಯೊಂದು ಹಂತದಲ್ಲೂ ನಮ್ಮ ತಂಡವು ವ್ಯವಸ್ಥಿತ ಮಾರ್ಗದರ್ಶನ ಮತ್ತು ಸಂಪೂರ್ಣ ಬೆಂಬಲವನ್ನು ಒದಗಿಸುತ್ತದೆ.

**ವಿಶೇಷ ವ್ಯಾಪಾರ ಅವಕಾಶ**
ವಿಶೇಷವಾದ **ಪ್ರಿಯಾ ಸಿಮೆಂಟ್** **ಸಲ್ಯೂಷನ್ಸ್ ಸೆಂಟರ್** ಪಾಲುದಾರರಾಗಿ ಕಾರ್ಯನಿರ್ವಹಿಸಿ ಮತ್ತು ನಿಮ್ಮ ಸ್ಥಳೀಯ ಮಾರುಕಟ್ಟೆಯಲ್ಲಿ ಬಲಿಷ್ಠ ಸ್ಥಾನವನ್ನು ನಿರ್ಮಿಸಿಕೊಳ್ಳಿ.

**ಸ್ಟೋರ್ ಅಭಿವೃದ್ಧಿಗೆ ಸಂಪೂರ್ಣ ನೆರವು**
ಸ್ಟೋರ್ ವಿನ್ಯಾಸ, ಬ್ರ್ಯಾಂಡಿಂಗ್ ಮಾನದಂಡಗಳು, ಮರ್ಚಂಡೈಸಿಂಗ್ ಹಾಗೂ ಅತ್ಯುತ್ತಮ ಗ್ರಾಹಕ ಅನುಭವವನ್ನು ಒದಗಿಸಲು ಅಗತ್ಯವಿರುವ ಸಂಪೂರ್ಣ ಬೆಂಬಲ ಮತ್ತು ಹೂಡಿಕೆಯನ್ನು ಪ್ರಿಯಾ ಸಿಮೆಂಟ್‌ನಿಂದ ಪಡೆಯಿರಿ.

**ಉತ್ಪನ್ನ ಮತ್ತು ವ್ಯವಹಾರದ ತರಬೇತಿ**
ನಮ್ಮ ತರಬೇತಿ ಕಾರ್ಯಕ್ರಮಗಳ ಮೂಲಕ ಉತ್ಪನ್ನಗಳ ಕುರಿತು ಸಮಗ್ರ ಜ್ಞಾನ, ಮಾರಾಟ ಕೌಶಲ್ಯಗಳು, ಗ್ರಾಹಕರೊಂದಿಗೆ ಪರಿಣಾಮಕಾರಿ ಸಂಪರ್ಕ ಸಾಧಿಸುವ ವಿಧಾನಗಳು ಹಾಗೂ ವ್ಯವಹಾರ ನಿರ್ವಹಣೆಯ ಕೌಶಲ್ಯಗಳನ್ನು ಕಲಿಯಿರಿ.

**ಮಾರ್ಕೆಟಿಂಗ್ ಮತ್ತು ಬ್ರ್ಯಾಂಡ್ ಬೆಂಬಲ**
ಗ್ರಾಹಕರ ಗಮನ ಸೆಳೆಯಲು ಹಾಗೂ ಹೆಚ್ಚಿನ ಗ್ರಾಹಕರನ್ನು ಆಕರ್ಷಿಸಲು ನೆರವಾಗುವ ಸ್ಥಳೀಯ ಮತ್ತು ಪ್ರಾದೇಶಿಕ ಮಾರ್ಕೆಟಿಂಗ್ ಉಪಕ್ರಮಗಳ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಿ.

**ವಿತರಣಾ ಬೆಂಬಲ**
ವಿವಿಧ ಸ್ಥಳಗಳು ಮತ್ತು ಗ್ರಾಹಕರಿಗೆ ಸಾಮಗ್ರಿಗಳನ್ನು ತಲುಪಿಸಲು ಕಂಪನಿಯು ನಿಮಗೆ ಸಂಪೂರ್ಣ ಸಹಾಯವನ್ನು ಒದಗಿಸುತ್ತದೆ.

**ಸ್ಥಳದಲ್ಲೇ ತಾಂತ್ರಿಕ ಬೆಂಬಲ**
ನಿರ್ಮಾಣ ಸ್ಥಳಗಳ ಭೇಟಿ ಹಾಗೂ ಸ್ಥಳೀಯ ಪ್ರಚಾರ ಚಟುವಟಿಕೆಗಳಿಗೆ ಸಹಾಯವಾಗುವಂತೆ ಕಂಪನಿಯ ವೆಚ್ಚದಲ್ಲಿ ತಾಂತ್ರಿಕ ವಾಹನಗಳನ್ನು ಕಳುಹಿಸಲಾಗುತ್ತದೆ.

**ತಂತ್ರಜ್ಞಾನ ಬೆಂಬಲ**
ನಿಮ್ಮ ವ್ಯವಹಾರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯ ಮಾಡುವ ಡಿಜಿಟಲ್ ಉಪಕರಣಗಳು ಮತ್ತು ವ್ಯವಸ್ಥೆಗಳನ್ನು ಬಳಸಿಕೊಳ್ಳುವ ಅವಕಾಶವನ್ನು ಪಡೆಯಿರಿ.

# ಆಗಾಗ ಕೇಳಲಾಗುವ ಪ್ರಶ್ನೆಗಳು

**1 ಸಿಮೆಂಟ್ ಅಥವಾ ನಿರ್ಮಾಣ ಕ್ಷೇತ್ರದಲ್ಲಿ ನನಗೆ ಪೂರ್ವ ಅನುಭವ ಇರಬೇಕೇ?**

ಇಲ್ಲ. ವಿವಿಧ ಕ್ಷೇತ್ರಗಳ ಹಿನ್ನೆಲೆಯಿಂದ ಬರುವ ಮಹತ್ವಾಕಾಂಕ್ಷೆಯ ಉದ್ಯಮಿಗಳನ್ನು ನಾವು ಸ್ವಾಗತಿಸುತ್ತೇವೆ. ನಮ್ಮ ತಂಡವು ನೊಂದಣಿ ಪ್ರಕ್ರಿಯೆಯ ಅವಧಿಯಲ್ಲಿ ಹಾಗೂ ನಂತರದ ದಿನನಿತ್ಯದ ಕಾರ್ಯಾಚರಣೆಗಳಲ್ಲೂ ಸಂಪೂರ್ಣ ಮಾರ್ಗದರ್ಶನ ಮತ್ತು ಬೆಂಬಲವನ್ನು ಒದಗಿಸುತ್ತದೆ.

**2 ವ್ಯವಹಾರವನ್ನು ಸ್ಥಾಪಿಸಲು ಪ್ರಿಯಾ ಸಿಮೆಂಟ್ ನನಗೆ ಸಹಾಯ ಮಾಡುತ್ತದೆಯೇ?**

ಹೌದು. ಅರ್ಹ ಅಭ್ಯರ್ಥಿಗಳಿಗೆ ಮೌಲ್ಯಮಾಪನ ಮತ್ತು ಪಾಲುದಾರರಾಗಿ ಸೇರ್ಪಡೆ ಪ್ರಕ್ರಿಯೆಯ ಮೂಲಕ ನಮ್ಮ ತಂಡವು ಮಾರ್ಗದರ್ಶನ ನೀಡುತ್ತದೆ ಹಾಗೂ ಶೋರೂಮ್ ಅಭಿವೃದ್ಧಿ ಮತ್ತು ವ್ಯವಹಾರ ಆರಂಭಕ್ಕೆ ಅಗತ್ಯವಿರುವ ಸಂಪೂರ್ಣ ಬೆಂಬಲವನ್ನು ಒದಗಿಸುತ್ತದೆ.

**3 ಈ ಅವಕಾಶವು ಮಹಿಳಾ ಉದ್ಯಮಿಗಳಿಗೂ ಲಭ್ಯವಿದೆಯೇ?**

ಖಂಡಿತವಾಗಿಯೂ. ಮಹಿಳಾ ಉದ್ಯಮಿಗಳನ್ನು ನಾವು ಪ್ರೋತ್ಸಾಹಿಸುತ್ತೇವೆ ಮತ್ತು ಈ ವ್ಯವಹಾರ ಅವಕಾಶವನ್ನು ಅನ್ವೇಷಿಸಲು ಹಾಗೂ ಯಶಸ್ಸು ಸಾಧಿಸಲು ಅವರಿಗೆ ಅಗತ್ಯವಾದ ಬೆಂಬಲವನ್ನು ನೀಡುತ್ತೇವೆ.

**4 ಪ್ರಿಯಾ ಸಿಮೆಂಟ್‌ನಿಂದ ನನಗೆ ಯಾವ ರೀತಿಯ ಬೆಂಬಲ ದೊರೆಯುತ್ತದೆ?**

ಪಾಲುದಾರರಾಗಿ ಸೇರ್ಪಡೆ ಪ್ರಕ್ರಿಯೆಯಲ್ಲಿ ಮಾರ್ಗದರ್ಶನ, ಶೋರೂಮ್ ಸ್ಥಾಪನೆಗೆ ನೆರವು, ಬ್ರಾ ್ಯಂಡಿಂಗ್ ಮಾನದಂಡಗಳು, ತರಬೇತಿ, ಮಾರ್ಕೆಟಿಂಗ್ ಬೆಂಬಲ, ಉತ್ಪನ್ನಗಳ ಕುರಿತು ಜ್ಞಾನ ಹಾಗೂ ನೀವು ಸ್ವತಂತ್ರವಾಗಿ ವ್ಯವಹಾರ ನಡೆಸುವವರೆಗೆ ನಿರಂತರ ಸಂಬಂಧ ನಿರ್ವಹಣೆ ಸೇರಿದಂತೆ ವಿವಿಧ ರೀತಿಯ ಬೆಂಬಲವನ್ನು ಒದಗಿಸಲಾಗುತ್ತದೆ.

**5 ಮೊದಲ ಬಾರಿಗೆ ಉದ್ಯಮ ಆರಂಭಿಸುವವರು ಅರ್ಜಿ ಸಲ್ಲಿಸಬಹುದೆ?**

ಹೌದು. ವ್ಯವಹಾರವನ್ನು ಆರಂಭಿಸಿ ಅದನ್ನು ಬೆಳೆಸುವ ಉತ್ಸಾಹ ಹೊಂದಿರುವ ವ್ಯಕ್ತಿಗಳು ಅರ್ಜಿ ಸಲ್ಲಿಸಲು ಪ್ರೋತ್ಸಾಹಿಸಲಾಗುತ್ತದೆ.

**6 ಆಯ್ಕೆ ಪ್ರಕ್ರಿಯೆಗೆ ಎಷ್ಟು ಸಮಯ ಬೇಕಾಗುತ್ತದೆ?**


ಸ್ಥಳ, ಮಾರುಕಟ್ಟೆಯ ಸಾಮರ್ಥ್ಯ ಹಾಗೂ ಮೌಲ್ಯಮಾಪನ ಪ್ರಕ್ರಿಯೆಯ ಪೂರ್ಣಗೊಳಿಸುವಿಕೆಯನ್ನು ಅವಲಂಬಿಸಿ ಸಮಯಾವಧಿಯಲ್ಲಿ ವ್ಯತ್ಯಾಸವಾಗಬಹುದು. ನಮ್ಮ ತಂಡವು ನಿಮ್ಮನ್ನು ವೈಯಕ್ತಿಕವಾಗಿ ಭೇಟಿ ಮಾಡಿ, ಸಂಪೂರ್ಣ ಪ್ರಕ್ರಿಯೆಯ ಬಗ್ಗೆ ವಿವರಿಸುತ್ತದೆ.

**7 ನಾನು ಈಗಾಗಲೇ ಬೇರೆ ವ್ಯವಹಾರವನ್ನು ನಡೆಸುತ್ತಿದ್ದರೆ ಅರ್ಜಿ ಸಲ್ಲಿಸಬಹುದೇ?**

ಹೌದು. ತಮ್ಮ ಪ್ರಸ್ತುತ ವ್ಯವಹಾರವನ್ನು ವಿಸ್ತರಿಸಲು ಅಥವಾ ಹೊಸ ಕ್ಷೇತ್ರಗಳನ್ನು ಅನ್ವೇಷಿಸಲು ಬಯಸುವ ಹಾಲಿ ವ್ಯವಹಾರ ಮಾಲೀಕರು ಕೂಡ ಅರ್ಜಿ ಸಲ್ಲಿಸಬಹುದು. ಸಿಮೆಂಟ್ ಕ್ಷೇತ್ರಕ್ಕೆ ಸಂಬಂಧಿಸದ ವ್ಯವಹಾರ ನಡೆಸುತ್ತಿರುವವರೂ ಅರ್ಜಿ ಸಲ್ಲಿಸಬಹುದು. ಸಿಮೆಂಟ್ ವ್ಯವಹಾರದಲ್ಲಿರುವವರು ಸಹ ಬೇರೆ ಸಂಸ್ಥೆಯ ಹೆಸರಿನ ಮೂಲಕ ಅರ್ಜಿ ಸಲ್ಲಿಸಬಹುದು. ಆದರೆ **ಪ್ರಿಯಾ ಸಿಮೆಂಟ್** **ಸಲ್ಯೂಷನ್ಸ್ ಸೆಂಟರ್** ಶೋರೂಮ್ ಮೂಲಕ ಇತರ ಯಾವುದೇ ಕಂಪನಿಯ ಸಿಮೆಂಟ್ ಬ್ರ್ಯಾಂಡ್‌ಗಳ ವ್ಯಾಪಾರ ಅಥವಾ ಪ್ರಚಾರವನ್ನು ಮಾಡಲು ಅನುಮತಿ ಇರುವುದಿಲ್ಲ. ಹಾಗೆಯೇ, ಈ ಶೋರೂಮ್‌ನಲ್ಲಿ ಯಾವುದೇ ಇತರ ವ್ಯವಹಾರ ಚಟುವಟಿಕೆಗಳನ್ನು ನಡೆಸಲು ಸಾಧ್ಯವಿಲ್ಲ.

**8 ನಾನು ನನ್ನ ವಿವರಗಳನ್ನು ಸಲ್ಲಿಸಿದ ನಂತರ ಪ್ರಿಯಾ ಸಿಮೆಂಟ್ ನನ್ನನ್ನು ಸಂಪರ್ಕಿಸುತ್ತದೆಯೇ?**

ಹೌದು. ಅರ್ಹ ಅರ್ಜಿದಾರರನ್ನು ನಮ್ಮ ತಂಡವು ಮುಂದಿನ ಮಾತುಕತೆಗೆ ಸಂಪರ್ಕಿಸುತ್ತದೆ.



**9 ಎಲ್ಲಾ ಸ್ಥಳಗಳಲ್ಲಿಯೂ ಈ ಅವಕಾಶಗಳು ಲಭ್ಯವಿದೆಯೇ?**

ಪ್ರಸ್ತುತ ಆಯ್ದ ಮಾರುಕಟ್ಟೆಗಳಲ್ಲಿ ಮಾತ್ರ ಈ ಅವಕಾಶಗಳು ಲಭ್ಯವಿವೆ. ಮಾರುಕಟ್ಟೆಯ ಸಾಮರ್ಥ್ಯ ಮತ್ತು ವ್ಯವಹಾರದ ಅಗತ್ಯತೆಗಳ ಆಧಾರದ ಮೇಲೆ ಅರ್ಜಿಗಳನ್ನು ಮೌಲ್ಯಮಾಪನ ಮಾಡುತ್ತದೆ.

**10 ನಾನು ನನ್ನ ಎನ್ಕ್ವೈರಿ ಅರ್ಜಿಯನ್ನು ಸಲ್ಲಿಸಿದ ನಂತರ ಏನಾಗುತ್ತದೆ?**

ನಮ್ಮ ತಂಡವು ನಿಮ್ಮ ಅರ್ಜಿಯನ್ನು ಪರಿಶೀಲಿಸಿ, ಆಯ್ಕೆಯಾದ ಅಭ್ಯರ್ಥಿಗಳನ್ನು ಸಂಪರ್ಕಿಸಿ ಈ ಅವಕಾಶದ ಕುರಿತು ಹೆಚ್ಚಿನ ವಿವರವಾಗಿ ಚರ್ಚಿಸುತ್ತದೆ.

## ನಿಮ್ಮಲ್ಲಿ ಇರಬೇಕಾದ ಅಗತ್ಯತೆಗಳು

A ನಿಮ್ಮದೇ ವ್ಯವಹಾರವನ್ನು ನಿರ್ಮಿಸಿಕೊಳ್ಳುವ ಉದ್ಯಮಶೀಲತೆಯ ಉತ್ಸಾಹ ಮತ್ತು ಆಸಕ್ತಿ.

B ಸ್ಥಳೀಯ ಪ್ರದೇಶದ ಬಗ್ಗೆ ಮೂಲಭೂತ ತಿಳುವಳಿಕೆ ಇರುವ ಸ್ಥಳೀಯ ವ್ಯಕ್ತಿಯಾಗಿರಬೇಕು.

C ಪ್ರತ್ಯೇಕ ಸ್ಟೋರ್ ಮತ್ತು ಸಣ್ಣ ಗೋದಾಮು ಸ್ಥಾಪಿಸಲು ಅಗತ್ಯವಿರುವ ಕನಿಷ್ಠ ಸ್ಥಳಾವಕಾಶ.

ಪ್ರತ್ಯೇಕ ಸ್ಟೋರ್‌ಗಾಗಿ: ಸುಮಾರು 200 ಚ.ಅಡಿ ಸ್ಥಳಾವಕಾಶ, 14 ಅಡಿ ಮುಂಭಾಗದ ಅಗಲ ಹೊಂದಿರಬೇಕು.
ಸ್ಟಾಕ್ ಸಂಗ್ರಹಣೆಗಾಗಿ ಗೋದಾಮು ; 150-200 ಚ.ಅಡಿ ಸ್ಥಳಾವಕಾಶ ಅಗತ್ಯವಿದ್ದು, ಅದು ಆದ್ಯತೆಯಾಗಿ ಶೋರೂಮ್‌ಗೆ ಹೊಂದಿಕೊಂಡಿರಬೇಕು ಅಥವಾ 2.ಕಿ.ಮೀ. ವ್ಯಾಪ್ತಿಯೊಳಗೆ ಇರಬೇಕು.

**ಇಂದೇ ಮೊದಲ ಹೆಜ್ಜೆ ಇಡಿ.**
ಎನ್ಕ್ವೈರಿ ಅರ್ಜಿಯನ್ನು ಭರ್ತಿ ಮಾಡಿ ಮತ್ತು ಅವಕಾಶದ ಬಗ್ಗೆ ಚರ್ಚಿಸಲು ನಮ್ಮ ತಂಡವನ್ನು ನಿಮ್ಮನ್ನು ಸಂಪರ್ಕಿಸುತ್ತದೆ.

## ಸಣ್ಣ ಎನ್ಕ್ವೈರಿ ಅರ್ಜಿ

ವೆಬ್‌ಸೈಟ್‌ನಲ್ಲಿರುವ ಕೆಳಗಿನ ಲಿಂಕ್ ನಲ್ಲಿ ದಯವಿಟ್ಟು ನಿಮ್ಮ ವಿವರಗಳನ್ನು ನಮೂದಿಸಿ.

***https://www.priyacement.com/Solutions/Enquiry***

**ಅಥವಾ ನಮ್ಮನ್ನು ಇಲ್ಲಿ ಸಂಪರ್ಕಿಸಿ :**

**ಕರ್ನಾಟಕ** : **96239 96239**

**ಅಥವಾ ಇಮೇಲ್ ಮಾಡಿ** : **partner@priyacement.com**

RAIN CEMENTS LIMITED

ಮಾರ್ಕೆಟಿಂಗ್ ಕಚೇರಿ:
4 ನೇ ಮಹಡಿ, ರೊಕ್ಸಾನಾ ಸನ್ನೆ, ಸರ್ದಾರ್ ಪಟೇಲ್ ರಸ್ತೆ,
ರಸೂಲ್‌ಪುರ ಮೆಟ್ರೋ ನಿಲ್ದಾಣದ ಹತ್ತಿರ,
ಹೈದರಾಬಾದ್, ತೆಲಂಗಾಣ - 500 003